# *Press Clipping*

**Publication** : **Vijaya Karnataka**

**Date** : **September 1, 2016**

**Edition** : **State**

**Page** : **1, Lavalavike**

---

## ಧ್ವನಿ ತಜ್ಞರಿಗೆ ಇನ್ನೂ ಸಿಗದ ಮನ್ನಣೆ: ಪೂಕುಟ್ಟಿ ಬೇಸರ



ಸ್ಲಮ್ ಡಾಗ್ ಮಿಲೇನಿಯರ್ ಚಿತ್ರಕ್ಕಾಗಿ ಆಸ್ಕರ್ ಪ್ರಶಸ್ತಿ ಪಡೆದಿರುವ ರೆಸೂಲ್ ಪೂಕುಟ್ಟಿ , ಕನ್ನಡದ 'ನಿರುತ್ತರ' ಚಿತ್ರಕ್ಕಾಗಿ ಧ್ವನಿ ವಿನ್ಯಾಸ ಮಾಡಿದ್ದಾರೆ.

'ಸಾಮಾನ್ಯವಾಗಿ ಚಿತ್ರದ ತಾರಾಗಣ, ಸೆಟ್, ಮೇಕಪ್, ದೃಶ್ಯ ಪರಿಣಾಮಗಳಿಗಾಗಿ ಸಾಕಷ್ಟು ಹಣ ವ್ಯಯಿಸಲಾಗುತ್ತದೆ. ಆದರೆ ಧ್ವನಿ ವಿನ್ಯಾಸಕಾರರಿಗೆ ಮಾತ್ರ ಮನ್ನಣೆ ಸಿಗುತ್ತಿಲ್ಲ. ಅದು ಸಿಗಬೇಕು. ಚಿತ್ರ ತಯಾರಕರು ಧ್ವನಿ ವಿನ್ಯಾಸದ ಮಹತ್ವವನ್ನು ಅರ್ಥ ಮಾಡಿಕೊಳ್ಳಬೇಕು' ಅನ್ನುವುದು ರೆಸೂಲ್ ಮಾತು.

ಅಪೂರ್ವ ಕಾಸರವಳ್ಳಿ ನಿರ್ದೇಶನದ ಈ ಸಿನಿಮಾ ವಿಭಿನ್ನ ಕಥಾ ಹಂದರವಿರುವ ಕಾರಣ, ಅದು ಇವರಿಗೆ ಸವಾಲಿನ ಕೆಲಸವಾಗಿತ್ತಂತೆ. ನಿರುತ್ತರ ಚಿತ್ರದ ಚಿತ್ರೀಕರಣ ಬೆಂಗಳೂರು, ರಾಜಸ್ತಾನ, ಗೋವಾದಿಂದ ಹಿಮಾಚಲ ಪ್ರದೇಶದವರೆಗೂ ನಡೆದಿದೆ. ■